


# ಕನ್ನಡ ಸಾಹಿತ್ಯದ ಮೇಲೆ ಶ್ರೀರಾಮಕೃಷ್ಣ-ವಿವೇಕಾನಂದರ ಪ್ರಭಾವ

ಡಾ. ಸಿ. ಪಿ. ಕೃಷ್ಣಕುಮಾರ್

**ಕನ್ನಡ ಸಾಹಿತ್ಯ ಮತ್ತು ಸಾಹಿತಿಗಳ ಮೇಲೆ, ಅದರಲ್ಲೂ ಶ್ರೀಕುವೆಂಪು ಅವರ ಮೇಲೆ, ಶ್ರೀರಾಮಕೃಷ್ಣ-ವಿವೇಕಾನಂದರು ಅಚ್ಚಳಿಯದ ಪ್ರಭಾವ ಬೀರಿದ್ದಾರೆ. ಇದನ್ನು ನಿರ್ದಿಷ್ಟ ನಿದರ್ಶನಗಳ ಮೂಲಕ ಸ್ವಾರಸ್ಯಕರವಾಗಿ ಪರಿಚಯ ಮಾಡಿಕೊಟ್ಟಿರುವ ಲೇಖಕರು ಕನ್ನಡದ ಹೆಸರಾಂತ ಲೇಖಕರು, ವಿಮರ್ಶನಕಾರರು, ಸಂಶೋಧಕರು.**

–೧–

ಪ್ರಕೃತ ವಿಷಯವನ್ನು ಕುರಿತು ಪರಿಶೀಲಿಸುವಾಗ ಆಧುನಿಕ ಕನ್ನಡ ಸಾಹಿತ್ಯದ ನವೋದಯ ಪ್ರಸ್ಥಾನವನ್ನಷ್ಟೆ ನಾವು ಪ್ರಧಾನವಾಗಿ ಪರಿಗಣಿಸಬೇಕಾಗುತ್ತದೆ. ಆ ಅವಧಿಯಲ್ಲಿ ತನ್ನ ಪರಮಾವಧಿ ಪ್ರಮಾಣದಲ್ಲಿ ಗೋಚರಿಸುತ್ತದೆ, ಶ್ರೀರಾಮಕೃಷ್ಣ-ವಿವೇಕಾನಂದ ಪ್ರಭಾವಶ್ರೀ.

ಸಾಹಿತಿಗಳನ್ನು ಮಾತ್ರವಲ್ಲ, ಇಡೀ ನವೋದಯ ಸಾಹಿತ್ಯವನ್ನು ಶ್ರೀರಾಮಕೃಷ್ಣ-ವಿವೇಕಾನಂದರ ಪ್ರಭಾವ ವ್ಯಾಪಿಸಿದೆ, ಅದನ್ನು ರೂಪಿಸಿದ ಧಾತುಗಳಲ್ಲಿ ಒಂದಾಗಿ ಕೆಲಸ ಮಾಡಿದೆ ಎನ್ನುವುದು ಗಮನಿಸಬೇಕಾದ ಮೂಲಭೂತವಾದ ಸಂಗತಿ. (ಅದರಲ್ಲೂ ಸ್ವಾಮಿ ವಿವೇಕಾನಂದರ ಪ್ರಭಾವ ಮಿಗಿಲು.) ಕನ್ನಡ ನವೋದಯ ಭರತಖಂಡದ ನವೋದಯದ ಒಂದು ಅಂಗವಾಗಿ ಕಾಣಿಸಿಕೊಂಡಿತಷ್ಟೆ. ನವಯುಗ ನಿರ್ಮಾಪಕ ಸ್ವಾಮಿ ವಿವೇಕಾನಂದರು ಭಾರತ ದೇಶದ ನವೋದಯದ ಹರಿಕಾರರಲ್ಲಿ, ಕ್ರತುಶಕ್ತಿಗಳಲ್ಲಿ ಅಗ್ರಮಾನ್ಯರಾಗಿದ್ದಾರೆ. ಈ ಬಗ್ಗೆ ಜವಹರಲಾಲ್ ನೆಹರೂ ಅವರ ಈ ಹೇಳಿಕೆಯನ್ನು ನಾವಿಲ್ಲಿ ಲಕ್ಷಿಸಬಹುದು :

**"ಸ್ವಾಮಿ ವಿವೇಕಾನಂದರ ಭಾಷಣ ಬರಹಗಳನ್ನು ತರುಣ ಪೀಳಿಗೆಯ ಎಷ್ಟು ಜನ ಓದುತ್ತಿದ್ದಾರೆಂಬುದು ನನಗೆ ತಿಳಿಯದು. ಆದರೆ ನನ್ನ ತಲೆಮಾರಿನ ಅನೇಕರು ಅವರಿಂದ ಬಹಳ ಗಾಢವಾಗಿ ಪ್ರಭಾವಿತರಾದರೆಂದು ನಾನು ಹೇಳಬಲ್ಲೆ....... ಸ್ವಾಮೀಜಿ ಬರೆದಿರುವುದು ಮತ್ತು ಹೇಳಿರುವುದು.... ಮುಂದೆ ಬಹುಕಾಲ ನಮ್ಮನ್ನು ಪ್ರಭಾವಿಸುವ ಸಂಭವವಿದೆ.... ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅವರು ಇಂದಿನ ಭಾರತದ ಮೇಲೆ ಪ್ರಬಲ ಪ್ರಭಾವ ಬೀರಿದ್ದಾರೆ."** ಸ್ವಾಮಿ ವಿವೇಕಾನಂದರ ಪ್ರಭಾವ ಎಂದರೆ ಅದು ಪರೋಕ್ಷವಾಗಿ ಶ್ರೀರಾಮಕೃಷ್ಣ ಪರಮಹಂಸರ ಪ್ರಭಾವವೂ ಹೌದು.

ಕನ್ನಡದ ನವೋದಯ ಸಾಹಿತ್ಯಕ್ಕೆ ಪಶ್ಚಿಮದ ಪ್ರೇರಣೆಗಳಂತೆ ಸ್ವದೇಶಿ ಪ್ರೇರಣೆಗಳೂ ಇವೆ. ಬಂಗಾಳಿ ಸಾಹಿತ್ಯದಿಂದ ಕನ್ನಡಕ್ಕೆ ಹೊಸ ಚೈತನ್ಯ ಬಂತು. ಅದರ ಮೇಲೆ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರು, ಶ್ರೀರಮಣ ಮಹರ್ಷಿಗಳು, ಶ್ರೀಅರವಿಂದರು, ರವೀಂದ್ರನಾಥ ಟಾಗೂರರು, ಗಾಂಧೀಜಿ ಮುಂತಾದವರ ವಿಚಾರಧಾರೆಗಳು ಪ್ರಭಾವ ಬೀರಿದುವು. ಅವರಲ್ಲಿ ಸ್ವಾಮಿ ವಿವೇಕಾನಂದರ ಪ್ರಭಾವ ಮಹತ್ವಪೂರ್ಣವಾದುದು. ವಿಮರ್ಶಕರೊಬ್ಬರು ಹೇಳುವಂತೆ, **"The Kannada poets made a creative use of the Vivekananda's philosophy"** (ಕನ್ನಡ ಕವಿಗಳು ವಿವೇಕಾನಂದರ ದರ್ಶನದ ಸೃಜನಾತ್ಮಕ ಉಪಯೋಗವನ್ನು ಮಾಡಿಕೊಂಡರು).

ನವೋದಯ ವಾಙ್ಮಯಕ್ಕೆ ಬಹಳಷ್ಟು ಪೋಷಣೆ, ಪ್ರೋತ್ಸಾಹಗಳನ್ನಿತ್ತ ಮೈಸೂರು ವಿಶ್ವವಿದ್ಯಾನಿಲಯದ 'ಪ್ರಬುದ್ಧ ಕರ್ಣಾಟಕ' ಪತ್ರಿಕೆಗೆ ಪ್ರೇರಕವಾದುದು, ರಾಮಕೃಷ್ಣ ಮಠದ 'ಪ್ರಬುದ್ಧ ಭಾರತ'



ಟಿ. ಎಸ್. ವೆಂಕಣ್ಣಯ್ಯನವರು



ಎ.ಆರ್.ಕೃಷ್ಣಶಾಸ್ತ್ರಿಗಳು

ಪತ್ರಿಕೆ ಎಂಬುದನ್ನು ನೆನೆಯಬೇಕು; 'ಪ್ರಬುದ್ಧ ಕರ್ನಾಟಕ' ಇಂದಿಗೂ ನಡೆದುಬರುತ್ತಿದೆ – ಆಧುನಿಕ ಕನ್ನಡದ ಮೇಲೆ ಆದ ಶ್ರೀರಾಮಕೃಷ್ಣ – ವಿವೇಕಾನಂದರ ಪ್ರಭಾವವನ್ನು ಗುಪ್ತವಾಗಿ ಘೋಷಿಸುತ್ತ!

"ಹೊಸಗನ್ನಡದ ಅಶ್ವಿನೀದೇವತೆ' ಗಳೆಂದು ಖ್ಯಾತರಾದ ಟಿ. ಎಸ್. ವೆಂಕಣ್ಣಯ್ಯನವರು ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು ಕೇವಲ ಲೇಖಕರಾಗಿರಲಿಲ್ಲ; ಸಾಧಕರೂ ಆಗಿದ್ದರು (ಈ ಮಾತು ವೆಂಕಣ್ಣಯ್ಯನವರಿಗೆ ಹೆಚ್ಚಾಗಿ ಅನ್ವಯಿಸುತ್ತದೆ). ಅವರಿಗೆ ಶ್ರೀರಾಮಕೃಷ್ಣಾಶ್ರಮದ ಸಂಪರ್ಕವಿತ್ತು. ಇಬ್ಬರೂ ಕೂಡಿ ಕನ್ನಡದಲ್ಲಿ ಮೊತ್ತಮೊದಲ ಬಾರಿಗೆ ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಬರೆದು, ಅದು ೧೯೧೯ ರಷ್ಟು ಹಿಂದೆಯೇ ಪ್ರಕಟವಾಯಿತು. ತನ್ಮೂಲಕ ಅವರು ಕನ್ನಡದಲ್ಲಿ ಶ್ರೀರಾಮಕೃಷ್ಣ–ವಿವೇಕಾನಂದ ಸಾಹಿತ್ಯಕ್ಕೆ ನಾಂದಿ ಹಾಡಿದರು.

ವೆಂಕಣ್ಣಯ್ಯ ಮತ್ತು ಕೃಷ್ಣಶಾಸ್ತ್ರಿ ಅವರನ್ನು ಕುರಿತು ಕುವೆಂಪು ಒಂದೆಡೆ ಬರೆಯುತ್ತಾರೆ: "ನನಗೆ ಮುಖ್ಯವಾಗಿ ಆ ಹೆಸರುಗಳು ಒಟ್ಟುಗೂಡಿದ್ದುದು ಕನ್ನಡದಲ್ಲಿ ಮೊತ್ತಮೊದಲನೆಯ ಕಿರುಹೊತ್ತಿಗೆ ಶ್ರೀರಾಮಕೃಷ್ಣ ಪರಮಹಂಸರ ಜೀವನಚರಿತ್ರೆಯನ್ನು ಬರೆದುದಕ್ಕಾಗಿ. ಅದನ್ನು ಓದಿದ ನನಗೆ ಅವರಿಬ್ಬರು ಬರಿಯ ಪ್ರಾಧ್ಯಾಪಕರಾಗಿ ಗೌರವಾನ್ವಿತರಷ್ಟೇ ಆಗಿರದೆ, ಆಧ್ಯಾತ್ಮಿಕವಾದ ಪೂಜ್ಯಭಾವನೆಗೂ ಭಾಜನರಾಗಿದ್ದರು."

–೨–

ಶ್ರೀರಾಮಕೃಷ್ಣ–ವಿವೇಕಾನಂದರ ಜೀವನ, ಸಾಧನೆ, ಚಿಂತನ ಸರಣಿಗಳ ಪ್ರಭಾವದ ಪರಾಕಾಷ್ಠ ದಶೆ ಕಂಡುಬರುವುದು ೨೦ನೆಯ ಶತಮಾನದ ಶಿಖರಪ್ರತಿಭೆ ಎಂದು ಕರೆಯಬಹುದಾದ ಕುವೆಂಪು ಅವರಲ್ಲಿ. ಅವರ ಬದುಕು, ಬರಹಗಳು ಆ ಪ್ರಭಾವಕ್ಕೆ ವಿಶೇಷ ಋಣಿಯಾಗಿದೆ. ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ, ಶ್ರೀಮಾತೆಯರನ್ನು ಕುರಿತು ಅವರು ಗದ್ಯಪದ್ಯಗಳಲ್ಲಿ ಬಹಳ ಬರೆದಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಆ ಮಹಾಚೇತನಗಳ ದಿವ್ಯ ಪರಿವೇಷವನ್ನು ಕಟ್ಟಿದ ಕೀರ್ತಿ ಮುಖ್ಯವಾಗಿ ಕುವೆಂಪು ಅವರದು. ಅವರ 'ಸ್ವಾಮಿ ವಿವೇಕಾನಂದ' (ಜೀವನಚರಿತ್ರೆ) ಒಂದು ಯುಗಪ್ರವರ್ತಕ ಪ್ರೋಜ್ವಲ ಕೃತಿ. ಪರಮಹಂಸರ ಜೀವನಚರಿತ್ರೆಯನ್ನೂ ಅವರು ಅತ್ಯಂತ ಪರಿಣಾಮಕಾರಿಯಾಗಿ ರಚಿಸಿದ್ದಾರೆ.

ತಮ್ಮನ್ನು **"ಶ್ರೀರಾಮಕೃಷ್ಣ ಭಗವದ್ ಗೋತ್ರ ಸಂಜಾತ"** ಎಂದು ಕರೆದುಕೊಂಡಿದ್ದಾರೆ, ಕುವೆಂಪು. ಮೊದಮೊದಲು ಅವರ ಮೇಲಾದುದು ಸ್ವಾಮಿ ವಿವೇಕಾನಂದರ ಪ್ರಭಾವ, ಮುಂದೆ ಅದು ಶ್ರೀರಾಮಕೃಷ್ಣರತ್ತ ಅವರನ್ನು ಕರೆದೊಯ್ದಿತು. ಕುವೆಂಪು ಅವರೊಬ್ಬ ರಸಋಷಿ. ಅವರನ್ನು ಪ್ರಭಾವಿಸಿದ ಶ್ರೀರಾಮಕೃಷ್ಣ ವಿವೇಕಾನಂದರಾಗಲಿ, ಸ್ವಾಮಿ ಸಿದ್ಧೇಶ್ವರಾನಂದರಾಗಲಿ ಗೊಡ್ಡು ಸಂನ್ಯಾಸಿಗಳಾಗಿರಲಿಲ್ಲ; ಕಲಾಭಿರುಚಿ, ರಸದೃಷ್ಟಿಗಳನ್ನು ಉಳ್ಳವರಾಗಿದ್ದರು. ಪರಮಹಂಸರಂತೆ ಕುವೆಂಪು ಕೂಡ ಸಂಸಾರ ಹೇಯವೆನ್ನುವುದಿಲ್ಲ.

ಶ್ರೀರಾಮಕೃಷ್ಣಾಶ್ರಮದ ಸಂಸರ್ಗ ಕುವೆಂಪು ಅವರಿಗಾಗುವ ಮುನ್ನವೆ ಅವರು ಪರಮಹಂಸ–ವಿವೇಕಾನಂದರಿಗೆ ಸಂಬಂಧಿಸಿದ ಸಾಹಿತ್ಯವನ್ನು ಗಾಢವಾಗಿ ಓದಿಕೊಂಡಿದ್ದರು, ಅದಕ್ಕೆ ಮನಸೋತಿದ್ದರು. ಆದರೂ ಅವರ ಆಧ್ಯಾತ್ಮಿಕ ನೌಕಾಯಾನಕ್ಕೆ ಧ್ರುವತಾರೆ ಲಭಿಸಿದ್ದು, ಅವರು ಶ್ರೀರಾಮಕೃಷ್ಣಾಶ್ರಮಕ್ಕೆ ಸೇರಿದ ಮೇಲೆಯೇ.

ತಮ್ಮ ಆತ್ಮಕಥೆಯ ಉದ್ದಕ್ಕೂ ತಮ್ಮ ದಿನಚರಿಯನ್ನು ಉದ್ಧರಿಸಿದ್ದಾರೆ, ಕುವೆಂಪು. ಅಲ್ಲಿ ನಿಚ್ಚಳವಾಗಿ ನೋಡುತ್ತೇವೆ, ಅವರ ಆಧ್ಯಾತ್ಮಿಕ ಪ್ರಗತಿಯ ಸೋಪಾನ ಪಂಕ್ತಿಯನ್ನು. ಗುರುಕೃಪೆ ತಮ್ಮನ್ನು ನಿರಂತರವಾಗಿ ಕೈಹಿಡಿದು ಕಾಪಾಡಿದ ಪರಿಯನ್ನು ಕುವೆಂಪು ಉದ್ದಕ್ಕೂ ತಿಳಿಸುತ್ತ ಹೋಗುತ್ತಾರೆ. "ನನ್ನಲ್ಲಿ ಏನಾದರೂ ಇತರರಲ್ಲಿ ಇಲ್ಲದ ಒಂದು ವಿಶೇಷ ವಿಭೂತಿ ಪ್ರಕಾಶಿತವಾಗಿದ್ದರೆ, ಅದಕ್ಕೆ ಶ್ರೀಗುರುವಿನ ಅನುಗ್ರಹವೇ ಕಾರಣ" ಎಂಬುದು ಅವರ ನಂಬಿಕೆ.

ಆರಂಭದಲ್ಲಿ ಕುವೆಂಪು ಚೇತನ, "ಪುಸ್ತಕಗಳಲ್ಲದೆ ಬೇರೆ ಮಾರ್ಗದರ್ಶಕರಿಲ್ಲದೆ" ಮುಂದುವರಿಯುತ್ತಿತ್ತು. ಸ್ವಾಮಿ ವಿವೇಕಾನಂದರ ಕೃತಿಗಳ ಅಧ್ಯಯನದಿಂದ ಅದ್ವೈತದ 'ಅಭೀಃ' ತತ್ತ್ವದ ಅನುಸಂಧಾನ ಅವರಿಗೆ ಸಾಧ್ಯವಾಯಿತು. ವಿವೇಕಾನಂದರ ಬಗೆಗೆ ಅವರು ಉದ್ಗರಿಸುತ್ತಾರೆ: "ಅವರ ಹೆಸರೇ ನನಗೊಂದು ವಿದ್ಯುತ್ ಸಂಚಾರವಾಗಿತ್ತು." ಅವರ ದಿನಚರಿ ಮೊದಮೊದಲು, "ಜಯ್ ಸ್ವಾಮಿ ವಿವೇಕಾನಂದ! ಜಯ್ ಶ್ರೀಕೃಷ್ಣ!" ಎಂದು ಕೊನೆಗೊಳ್ಳುತ್ತದೆ. ಮುಂದೆ ಈ ಹೆಸರುಗಳ ಜೊತೆಗೆ ಪರಮಹಂಸರದೂ ಸೇರುತ್ತದೆ.

ಅವರ ಒಂದು ಅನುಭವ ಹೀಗಿತ್ತು: "ಶ್ರೀರಾಮಕೃಷ್ಣ ಪರಮಹಂಸ ದೇವರ ಜೀವನಚರಿತ್ರೆ ಓದಲು ತೆಗೆದುಕೊಂಡೆ. ಆ ಪುಸ್ತಕ ತೆಗೆದುಕೊಂಡವನು, ಹಾಗೆಯೆ ಸುಮ್ಮನೆ ತೆರೆದರೆ,..... ನನ್ನ ಗುರುದೇವರ ಭಾವಚಿತ್ರ ನನ್ನತ್ತ ನಗೆ ಬೀರಿತು! ಆ ಪಟವನ್ನು ನಿರ್ನಿಮೇಷನಾಗಿ ಈಕ್ಷಿಸುತ್ತಿರಲು, ಏನೋ ಒಂದು ನನ್ನ ಶರೀರ ಪ್ರವೇಶಮಾಡಿದಂತಾಗಿ, ನನ್ನನ್ನು ನಡುಗುವಂತೆ ಮಾಡಿತು!"

ಶ್ರೀರಾಮಕೃಷ್ಣಾಶ್ರಮಕ್ಕೆ ಒಂದೊಂದು ಸಲ ಹೋದಾಗಲೂ ಅದೊಂದು 'ಆಧ್ಯಾತ್ಮಿಕ ತೀರ್ಥಯಾತ್ರೆ' ಯಾಗುತ್ತಿತ್ತು, ಕುವೆಂಪು ಅವರ ಪಾಲಿಗೆ. ಕ್ರಮೇಣ ಅದು ಅವರ 'ಒಳಬಾಳಿನ ಕೇಂದ್ರ'ವಾಗತೊಡಗಿತು. ಒಬ್ಬರು ತಂದುಕೊಟ್ಟ ಶ್ರೀಗುರು ಮಹಾರಾಜ್, ಶ್ರೀಮಹಾಮಾತೆ ಮತ್ತು ಶ್ರೀವಿವೇಕಾನಂದರ 'ಚಿತ್ರಮಾಲಿಕೆ'ಯಿಂದಾಗಿ, ಕುವೆಂಪು ಅವರಲ್ಲಿ ಒಂದು ಆಧ್ಯಾತ್ಮಿಕ 'ವಿದ್ಯುತ್ ಕೇಂದ್ರ'ವೇ ಸ್ಥಾಪಿತವಾಯಿತು! ಅಂತೂ ಆಶ್ರಮ ಪ್ರವೇಶದಿಂದ ಒಂದು 'ದಿವ್ಯ ಅಧ್ಯಾಯ' ಅವರ ಜೀವನದಲ್ಲಿ ಮೊದಲಾಯಿತು.

ಒಮ್ಮೆ ಕುವೆಂಪು ಅವರಿಗೆ ಸಿಡುಬಾದಾಗ, ಅವರ ಮೇಲೆ ಸ್ವಾಮಿ ವಿವೇಕಾನಂದರ 'ಆವಾಹನೆ'ಯಾಗುತ್ತದೆ! (ಮನೋವೈಜ್ಞಾನಿಕವಾಗಿ ನೋಡಿದರೆ, ಸ್ವಾಮೀಜಿಯ ಪ್ರಭಾವದ ಉತ್ಕಟತೆಗೆ ಅದು ಪ್ರತೀಕವಷ್ಟೆ). ಆಗ ಕುವೆಂಪು ಉದ್ಗರಿಸುತ್ತಿದ್ದರಂತೆ: "ಪುಟ್ಟಪ್ಪ ಸತ್ತು ಹೋದ; ನಾನು ವಿವೇಕಾನಂದ!"

'ವಿಶ್ವವಿದ್ಯಾನಿಲಯೆ ಭಗವತಿ ಶ್ರೀಸರಸ್ವತಿಗೆ' ಎಂಬ ಕುವೆಂಪು ಅವರ ಕವನವೊಂದರ ಈ ಸಾಲುಗಳೂ ಈ ಸಂಬಂಧದಲ್ಲಿ ಸ್ಮರಣಯೋಗ್ಯ:

**ಚಿದ್ರೂಪಿಣಿ ಭವತಾರಿಣಿ ಉತ್ತರೋತ್ತರೆ**
**ಕವಿಯನೆತ್ತಿ ರಕ್ಷಿಸಲ್ಕೆ**
**ಬಂದಳಿತ್ತ ದಕ್ಷಿಣಕ್ಕೆ**
**ಶ್ರೀ ವಿವೇಕ ಪರಮಹಂಸ ದಕ್ಷಿಣೇಶ್ವರೆ**
**ಕಣ್ದೆರೆಯಿತು ಬೋಧನಾ**
**ಗರಿಗೆದರಿತು ಸಾಧನಾ**
**ಅಲೋಕ ಲೋಕಯಾತ್ರಿಯಾಯ್ತು**
**ದಿವ್ಯ ದರ್ಶನ !**

ಸ್ವಾಮಿ ವಿವೇಕಾನಂದರು 'ಉತ್ಸವವಿಗ್ರಹ'ವಾದರೆ, ಶ್ರೀರಾಮಕೃಷ್ಣರು 'ಮೂಲಮೂರ್ತಿ'. ಆ ಮಹಾಗುರು, ಶಿಷ್ಯರಲ್ಲಿ ಯಾರೊಬ್ಬರೂ ಜನಸಾಮಾನ್ಯರ ಲೌಕಿಕ ಕ್ಷೇಮ, ಅಭ್ಯುದಯಗಳನ್ನು ತಿರಸ್ಕರಿಸಿದವರಲ್ಲ. ಶ್ರೇಯಸ್ಸಿನಂತೆ ಪ್ರೇಯಸ್ಸನ್ನೂ ಅವರು ಪುರಸ್ಕರಿಸಿದರು; ಸಾಮಾಜಿಕ ಪ್ರಜ್ಞೆ ಅವರಲ್ಲಿ ದಟ್ಟವಾಗಿತ್ತು. ಅವರ ಆಲೋಚನಾಧಾರೆಯಿಂದ ಸ್ಫೂರ್ತಿಗೊಂಡವರು ಕುವೆಂಪು.

**ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿಗಳು** ತಮ್ಮ ಸಾಹಿತ್ಯದ ಮೂರು ಕಣ್ಣುಗಳೆಂದು ಹೇಳಿಕೊಂಡಿದ್ದಾರೆ, ಕುವೆಂಪು. ಮೊದಲನೆಯದಾಗಿ, **ಸಮನ್ವಯ.** ಪರಮಹಂಸರು 'ಸರ್ವಧರ್ಮ ಸಮನ್ವಯಾಚಾರ್ಯ' ಎಂದು ಪ್ರಸಿದ್ಧರಾಗಿದ್ದಾರಷ್ಟೆ. ತಮ್ಮ 'ಸ್ವಾಮಿ ವಿವೇಕಾನಂದ' ಜೀವನ ಚರಿತ್ರೆಯ 'ಕರೆಯುತಿದೆ ಯುಗವಾಣಿ' ಎಂಬ ಅಂತಿಮ ಅಧ್ಯಾಯದಲ್ಲಿ ಕುವೆಂಪು ಅವರೇ ಹೀಗೆ ಹೇಳುತ್ತಾರೆ: "ಅವರಲ್ಲಿ ಪ್ರಾಚ್ಯ, ಪಾಶ್ಚಾತ್ಯ, ಹಿಂದೂ, ಕ್ರೈಸ್ತ, ಇಸ್ಲಾಂ, ಬೌದ್ಧ, ಮತ, ತತ್ತ್ವ, ವಿಜ್ಞಾನ, ಕಲೆ, ಇಹ, ಪರ, ದೇಹ, ಆತ್ಮ, ನೂತನ, ಪುರಾತನ ಎಲ್ಲವೂ ಸಮನ್ವಯಗೊಂಡಿವೆ." ಈ ಸಮನ್ವಯಲಕ್ಷ್ಮಿ ಕುವೆಂಪು ಅವರನ್ನು ಪ್ರಭಾವಿಸಿದೆ, ನಿಸ್ಸಂದೇಹವಾಗಿ.

ಇನ್ನು **ಸರ್ವೋದಯ** ವಿಚಾರ. ಇಂದಿನ ಯುಗಧರ್ಮ, ಸರ್ವೋದಯ. ಅದು ಕುವೆಂಪು ಅವರ ಸಾಹಿತ್ಯ ಸಮಸ್ತದಲ್ಲೂ ಓತಪ್ರೋತವಾಗಿರುವ ತತ್ತ್ವ. ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಸರ್ವೋದಯ ಸಂದೇಶವೆ ಮೊಳಗುತ್ತಿದೆ. **"ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್!"** ಈ ಸೂಕ್ತಿ ಸ್ವಾಮಿ ವಿವೇಕಾನಂದರ ಕರೆಯ ಮಾರ್ದನಿ ಮಾತ್ರವಲ್ಲದೆ, ಇಡೀ ಕಾವ್ಯ ಅದಕ್ಕೆ ಬರೆದ ಭಾಷ್ಯವೂ ಆಗಿದೆ. ಪಾಪಿಗಳಿಗಷ್ಟೇ ಅಲ್ಲ, ದೀನದಲಿತರಿಗೂ ಉದ್ಧಾರವಿದೆ. ಸರ್ವೋದಯ ತತ್ತ್ವ ವ್ಯಾಪಕವಾದುದು. ತಮ್ಮ 'ಶ್ರೀಸಾಮಾನ್ಯರ ದೀಕ್ಷಾಗೀತೆ'ಯಲ್ಲಿ ಕುವೆಂಪು ಉದ್ಗರಿಸುತ್ತಾರೆ :

**ಸರ್ವೋದಯ, ಸರ್ವೋದಯ, ಸರ್ವೋದಯ ಯುಗಮಂತ್ರ !**
**ಇನ್ನಾಯಿತು ಓರೋರ್ವರ ಗರ್ವದ ಕಾಲ, ಇದು ಸರ್ವರ ಕಾಲ!**

ಸ್ವಾತಂತ್ರ್ಯ ಸಮಾನತೆಗಳ ಮೇಲೆ, ಸಾಮಾನ್ಯರ ಉದ್ಧಾರದ ಮೇಲೆ ಕುವೆಂಪು ಅವರ ಅವಧಾರಣೆ; ಅವರು ಹೇಳುತ್ತಾರೆ:

**ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!**
**ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!**



ವಸ್ತುತಃ ಸರ್ವೋದಯ ಮಂತ್ರದ ಉಚ್ಚಾರಣೆ, ಸರ್ವೋದಯ ತತ್ತ್ವದ ಉದ್ಘಾಟನೆ ಆದುದು ಶ್ರೀರಾಮಕೃಷ್ಣ–ವಿವೇಕಾನಂದರಿಂದ (ಆದರೆ ಈ ಮಾತನ್ನು ಕೊಟ್ಟವರು ಗಾಂಧೀಜಿ). **"ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ"** ಎಂಬ ಶ್ರೀರಾಮಕೃಷ್ಣ ಮಹಾಸಂಘದ ಧ್ಯೇಯವಾಕ್ಯವನ್ನಿಲ್ಲಿ ನೆನೆಯಬಹುದು. ಪರಮಹಂಸರನ್ನು 'ನವಯುಗದ ಪ್ರವರ್ತಕ' ಎಂದು ಕರೆಯುತ್ತಾರೆ, ವಿವೇಕಾನಂದರು. ಅದಕ್ಕೆ ವಿವರಣೆ ಕೊಡುತ್ತಾರೆ: "ಶ್ರೀರಾಮಕೃಷ್ಣರು ಹುಟ್ಟಿದ ದಿನದಿಂದಲೆ ನವೀನ ಭಾರತದ ಮತ್ತು ಸ್ವರ್ಣಯುಗದ ದಿನ ಮೊದಲಾಯಿತು."

ಕುವೆಂಪು ಸಾಮಾನ್ಯನನ್ನು 'ಶ್ರೀಸಾಮಾನ್ಯ'ನೆಂದು ಕರೆದು "ಶ್ರೀಸಾಮಾನ್ಯನೆ ಭಗವದ್ಧನ್ಯ!" ಎಂದರು; ಅವನ ಅನ್ನ, ಬಟ್ಟೆಗಳ ಪೂರೈಕೆಗೆ ಆದ್ಯತೆ ನೀಡಿದರು. ಸ್ವಾಮಿ ವಿವೇಕಾನಂದರಾದರೊ 'ದರಿದ್ರನಾರಾಯಣ' ಎಂಬ ಹೊಸ ದೇವರನ್ನೇ ಕಂಡುಹಿಡಿದು, "ದರಿದ್ರದೇವೋ ಭವ!" (ಬಡವರು ನಿಮ್ಮ ದೇವರಾಗಲಿ) ಎಂಬ ಮಂತ್ರವನ್ನಿತ್ತರು. ಮೊದಲು ಅನ್ನ, ಆಮೇಲೆ ಅಧ್ಯಾತ್ಮ ಎಂದು ಹೇಳಲು ಅವರು ಮರೆಯಲಿಲ್ಲ. "ನಾನೊಬ್ಬ ಸಮಾಜವಾದಿ!" ಎಂದು ಹೇಳಿಕೊಳ್ಳುವ ವಿವೇಕಾನಂದರು. "ಜನಸಾಮಾನ್ಯರು ಮತ್ತು ಬಡವರು ಮೇಲೆ ಏಳಬೇಕು!" ಎಂಬ ಸಂಕಲ್ಪವನ್ನು ವ್ಯಕ್ತಪಡಿಸಿ, "ಸೇವೆಯೇ ಪೂಜೆ!" ಎಂಬ ಸೂತ್ರವನ್ನು ಟಂಕಿಸುತ್ತಾರೆ. ಮೂಲತಃ ಶ್ರೀರಾಮಕೃಷ್ಣರದೆ ಈ ಮಹಾವಾಕ್ಯ: "ದೇವರನ್ನು ಅರಸುವುದಾದರೆ ಮನುಷ್ಯರಲ್ಲಿ ಅರಸು!"

ಕುವೆಂಪು ಮೌಢ್ಯವಿರೋಧಿ : "ಮೌಢ್ಯತೆಯ ಮಾರಿಯನು ಹೊರದೂಡಲ್ಲೈ ತನ್ನಿ!" ಎಂಬುದು ಅವರ ಆಹ್ವಾನ. ವಿವೇಕಾನಂದರು ಘೋಷಿಸುತ್ತಾರೆ: "ಮೌಢ್ಯವು ಮಾನವನ ಮಹಾಶತ್ರು!"

ಕುವೆಂಪು ಅವರ ವಿಚಾರಧಾರೆಯ ಮೇಲೆ ಸ್ವಾಮಿ ವಿವೇಕಾನಂದರ ಪ್ರಭಾವ ಎಷ್ಟು ಸಾಂದ್ರವಾಗಿದೆಯೆಂದರೆ, ಎಷ್ಟೋ ಕಡೆ ಅವರನ್ನು ಕುವೆಂಪು ಅನುವಾದಿಸುತ್ತಿದ್ದಾರೆಯೇನೋ ಎನಿಸುತ್ತದೆ. ಉದಾಹರಣೆಗೆ ಕುವೆಂಪು ಅವರ,

**ನೂರು ದೇವರನೆಲ್ಲ ನೂಕಾಚೆ ದೂರ;**
**ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ**

ಎಂಬ ಕರೆಯೊಡನೆ ವಿವೇಕಾನಂದರ ಈ ಹೇಳಿಕೆಯನ್ನು ಹೋಲಿಸಬಹುದು: "ಇನ್ನೊಂದು ಐವತ್ತು ವರ್ಷಗಳವರೆಗೆ ನಿಮ್ಮ ದೇವದೇವತೆಗಳನ್ನೆಲ್ಲ ಮನಸ್ಸಿನಿಂದ ತಳ್ಳಿಬಿಡಿ. ಭಾರತಾಂಬೆಯೆ ನಮ್ಮ ದೇವರಾಗಲಿ!" ಹೀಗೆಯೇ, ಕುವೆಂಪು ಅವರ ಮುಂದಿನ ಕೋರಿಕೆಯೂ ವಿವೇಕಾನಂದ ಪ್ರೇರಿತವೇ:

**ಕ್ಲೈಬ್ಯವನು ಸಂಹರಿಸೊ ದೌರ್ಬಲ್ಯವನು ದಹಿಸೊ**
**ಹೃದಯಕ್ಕೆ ಪೌರುಷವ ದಯಪಾಲಿಸೊ !**

ಸ್ವಾಮಿ ವಿವೇಕಾನಂದರ ಅಸೀಮ ದೇಶಪ್ರೇಮ ಕುವೆಂಪು ಅವರ ದೇಶಭಕ್ತಿ ಗೀತೆಗಳನ್ನು ಸಹಜವಾಗಿಯೆ ಪ್ರಭಾವಿಸಿದೆ.

ಕುವೆಂಪು ವೈಜ್ಞಾನಿಕ, ವೈಚಾರಿಕ ದೃಷ್ಟಿಯ ಅಪ್ರತಿಮ ಪ್ರತಿಪಾದಕರಾಗಿ, **"ವಿಜ್ಞಾನ ದೀವಿಗೆಯ ಹಿಡಿಯಬನ್ನಿ"** ಎಂದು ಕರೆ ನೀಡುತ್ತಾರೆ. ಅಧ್ಯಾತ್ಮ, ವಿಜ್ಞಾನಗಳ ಸಮನ್ವಯವನ್ನು ಪುರಸ್ಕರಿಸುವ ವಿವೇಕಾನಂದರು ಮೂಲತಃ 'ವಿಚಾರ ಸ್ವಾತಂತ್ರ್ಯ'ವನ್ನು ಎತ್ತಿ ಹಿಡಿದವರು. ಹಾಗೆ ನೋಡಿದರೆ, ಶ್ರೀರಾಮಕೃಷ್ಣ ಪರಮಹಂಸರಲ್ಲಿಯೆ ವೈಜ್ಞಾನಿಕ ಮನೋಧರ್ಮವನ್ನು ಎದುರುಗೊಳ್ಳುತ್ತೇವೆ.

ವಿವೇಕಾನಂದರದು ವೇದಾಂತದ ಅದ್ವೈತದ ನಿಲುವು: ಅದು ವೈಜ್ಞಾನಿಕವಾದುದೂ ಹೌದು. ಕುವೆಂಪು ಅವರಲ್ಲೂ ಅದ್ವೈತದ ಅನುಭವಗಳು ಪ್ರಣೀತವಾಗಿವೆ.

**ವೇದಾಂತ ಕೇಸರಿಯಾಗೋ ಮಾನವ**
**ಲೋಕಾರಣ್ಯದೊಳಲೆದಾಡೆ**

ಮುಂತಾದ ಮಾತುಗಳಲ್ಲಿ ವಿವೇಕವಾಣಿಯ ಛಾಯೆಯನ್ನು ಗುರುತಿಸಬಹುದು.

ಕುವೆಂಪು ಅವರ ಪ್ರಸಿದ್ಧವಾದ ವಿಶ್ವಮಾನವ ಸಂದೇಶದ ಮೂಲ ಶ್ರೀರಾಮಕೃಷ್ಣ, ವಿವೇಕಾನಂದರ ದರ್ಶನದಲ್ಲಿದೆ. ಶ್ರೀರಾಮಕೃಷ್ಣರು ಸರ್ವಧರ್ಮಗಳ ಏಕತೆಯನ್ನು ಒತ್ತಿ ಹೇಳಿದರು. ಸಂಕುಚಿತ ಪಂಥಾಭಿಮಾನ ವಿರೋಧಿಯಾಗಿ, ಧಾರ್ಮಿಕಶ್ರದ್ಧೆಯ ಸಾರತತ್ತ್ವಗಳಿಗೆ ಪ್ರಾಧಾನ್ಯವಿತ್ತ ಪರಮಹಂಸರನ್ನು 'ವಿಶ್ವಧರ್ಮ ದ್ರಷ್ಟಾರ' ಎಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ವಿಶ್ವಮಾನವ ಸಿದ್ಧಾಂತವನ್ನು, 'ಪಂಚಮಂತ್ರ', 'ಸಪ್ತಸೂತ್ರ'ಗಳನ್ನು ಪರಿಭಾವಿಸಬೇಕು. ಅವರ 'ಅನಿಕೇತನ' ಕವನವೂ ಸ್ಮರಣೀಯ.

‘ವಿಶ್ವಮಾನವ ಸಂದೇಶ’ದ ಆರಂಭದಲ್ಲೆ ಸ್ವಾಮಿ ವಿವೇಕಾನಂದರ ಈ ಹೇಳಿಕೆ ಉದ್ಧೃತವಾಗಿರುವುದನ್ನು ಗಮನಿಸಬೇಕು: “No man is born to any religion. Every man has religion in his soul. Let there be as many religions as there are human beings in the world.” (‘ಸಪ್ತಸೂತ್ರ’ದಲ್ಲಿ ಇದರ ಭಾಷಾಂತರವನ್ನು ಕೊಡಲಾಗಿದೆ: “ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬರೂ ತಾವು ಕಂಡುಕೊಳ್ಳುವ ‘ತನ್ನ’ ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿರುತ್ತಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ”.)

**ವಿಶ್ವಪ್ರಜ್ಞೆ, ವಿಶ್ವಮೈತ್ರಿ, ವಿಶ್ವಶಾಂತಿ**ಗಳನ್ನು ಕುವೆಂಪು ಪ್ರತಿಪಾದಿಸುವಲ್ಲಿ ಪರಮಹಂಸ, ವಿವೇಕಾನಂದ ಪ್ರಭಾವ ಉಂಟೇ ಉಂಟು.

ವಿವೇಕಾನಂದರಂತೆ, ಜಾತಿಪದ್ಧತಿ, ಪುರೋಹಿತಶಾಹಿಗಳನ್ನು ಕುವೆಂಪು ಕೂಡ ಖಂಡಿಸುತ್ತಾರೆ (ಪುರೋಹಿತಶಾಹಿಯನ್ನು ವಿವೇಕಾನಂದರಷ್ಟು ಉಗ್ರವಾಗಿ ಖಂಡಿಸಿದವರು ಮತ್ತೊಬ್ಬರಿಲ್ಲ ಎನ್ನಬಹುದು).

**“ಗುಡಿ ಚರ್ಚು ಮಸಜಿದಿಗಳ ಬಿಟ್ಟು ಹೊರಬನ್ನಿ!”** ಎಂಬುದು ಕುವೆಂಪು ಅವರ ಪ್ರಸಿದ್ಧವಾದ ಕರೆ. ಅದಕ್ಕೆ ಪ್ರೇರಕವಾದುದು ಈ ವಿವೇಕವಾಣಿ : “ಸಿದ್ಧಾಂತ ಪಂಥಗಳನ್ನು, ಚರ್ಚುದೇಗುಲಗಳನ್ನು ಲಕ್ಷಿಸಬೇಡಿ; ಪ್ರತಿಯೊಬ್ಬರಲ್ಲಿರುವ ಅಸ್ತಿತ್ವದ ತಿರುಳಿನೊಡನೆ – ಅಧ್ಯಾತ್ಮದೊಡನೆ – ಹೋಲಿಸಿದರೆ, ಅವು ಲೆಕ್ಕಕ್ಕಿಲ್ಲ.”

–೩–

ಶ್ರೀರಾಮಕೃಷ್ಣ ವಿವೇಕಾನಂದರನ್ನು ಕುರಿತು ಕುವೆಂಪು ಅನೇಕ ಕವನಗಳನ್ನು ರಚಿಸಿದ್ದಾರೆ. ಅವರ ‘ಆಹ್ವಾನ’ ಎಂಬ ಪದ್ಯ ಪರಮಹಂಸರನ್ನು ಮಲೆನಾಡಿಗೆ ಆಹ್ವಾನಿಸುವ ನೆಪದಲ್ಲಿ ಇಡೀ ಕರ್ನಾಟಕಕ್ಕೆ ಆಮಂತ್ರಿಸಿತು, ಬರಮಾಡಿತು:

ಬಾ, ಶ್ರೀ ಗುರುದೇವನೆ ಬಾ,
ಶ್ಯಾಮಲ ಕಾನನ ಶೃಂಗತರಂಗಿತ
ಸಹ್ಯಾದ್ರಿಯ ಸುಂದರ ಮಂದಿರಕೆ......
ವಂಗಮಾತೆಯಲಿ ಜನ್ಮವನೆತ್ತಿ
ದಿವ್ಯಸಮನ್ವಯ ಧರ್ಮವ ಬಿತ್ತಿ
ಮತಭೇದದ ವಿಷವನು ಹೋಗಾಡಿ
ಲೋಕದ ದೃಷ್ಟಿಗೆ ಸಮತೆಯ ನೀಡಿ
ಕಾಪಾಡಿದ ಪಾವನ ಮೂರುತಿಯೆ......

ತಮ್ಮ ‘ಶ್ರೀಗುರು’ ಕವನದಲ್ಲಿ ಶ್ರೀರಾಮಕೃಷ್ಣರ ಮಹಿಮೆಯನ್ನು ಕುವೆಂಪು ಹೀಗೆ ಹಾಡುತ್ತಾರೆ :

ಭರತಖಂಡದ ನೀಲಗಗನವ ತಿಮಿರ ಮುಸುಗಿರಲು,
ಭಾರತೀಯರು ತಮ್ಮ ಧ್ಯೇಯವ ಮರೆತು ಮಲಗಿರಲು,
ಪರಮಹಂಸನೆ, ಉದಯಸೂರ್ಯನ ತೆರದಿ ರಂಜಿಸಿದೆ;
ಹೃದಯನಭದಜ್ಞಾನ ತಿಮಿರವನಿರದೆ ಭಂಜಿಸಿದೆ.
ಮಾಯೆತಿಮಿರದಿ ಮಾರ್ಗ ಕಾಣದೆ ಗೋಳಿಡುತಲಿಹರ
ಅಭಯದೀಪವ ಹಿಡಿದು ದಾರಿಯ ತೋರಿ ರಕ್ಷಿಸಿದೆ;
ಘೋರ ಸಂಸಾರಾಂಬುನಿಧಿಯೊಳು ಮುಳುಗಿ ತೇಲುವರ
ಅಮೃತನಾವೆಯ ತಂದು ವೇಲೆಯನಿರದೆ ಸೇರಿಸಿದೆ.

ಕುವೆಂಪು ಅವರ ‘ಶತಮಾನ ಸಂಧ್ಯೆ’ ಎಂಬ ನೀಳ್ಗವನ ತುಂಬ ಗಮನಾರ್ಹವಾದುದು; ಹೊಸ ಶತಮಾನ, ಹೊಸ ಸಹಸ್ರಮಾನದ ಪ್ರವೇಶದ ಈ ಸಂದರ್ಭಕ್ಕೂ ಪ್ರಸ್ತುತವಾದುದು. ಇದು ಕವನದ ಒಂದು ಭಾಗ :

ಯುಗಚಕ್ರವ ಮುನ್ನೂಂಕಲು
ಇದೆ ಗುರುದೇವನ ಶಕ್ತಿ.
ನಮಗಿಂದಿಗೆ ಬೇಕಾದುದು
ಉದ್ಧಾರದ ಆಸಕ್ತಿ.

ಸ್ವಾಮಿ ವಿವೇಕಾನಂದರನ್ನು ಕುರಿತ ಕುವೆಂಪು ಅವರ ಭಾವನಿರ್ಭರ ಉದ್ಗಾರವಿದು :

ಶ್ರೀವಿವೇಕಾನಂದ ಗುರುವರ, ನವಯುಗಾಚಾರ್ಯ,
ರಾಮಕೃಷ್ಣರ ಭೀಮಶಿಷ್ಯನೆ, ವೀರವೇದಾಂತಿ,
ಭಾರತಾಂಬೆಯ ಧೀರಪುತ್ರನೆ, ಸಾಧು ಭೈರವನೆ,
ಸ್ಥೈರ್ಯದಚಲವೆ, ಧೈರ್ಯದಂಬುಧಿ, ಜಯತು! ಜಯ ಜಯತು!

ಕುವೆಂಪು ಅವರ ‘ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಸಂದೇಶ’ ಎಂಬ ಮೌಲಿಕ ಲೇಖನವೂ ಇಲ್ಲಿ ಉಲ್ಲೇಖನೀಯ.

–೪–

ಮಾಸ್ತಿ ವೆಂಕಟೇಶ ಅಯ್ಯಂಗಾರರು ೧೯೩೬ ರಷ್ಟು ಹಿಂದೆಯೆ ‘ಶ್ರೀರಾಮಕೃಷ್ಣ’ ಎಂಬ ವಿಶಿಷ್ಟ ಪುಸ್ತಕವನ್ನು ಪ್ರಕಟಿಸಿದರು. ‘ಶ್ರೀವಿವೇಕಾನಂದರ ಕೋಣೆಯನ್ನು ನೋಡಿ’ ಎಂಬ ಕವನದಲ್ಲಿ ಅವರು,

ಇಲ್ಲಿ ಕುಳಿತಿರ್ದನೇ ಗುರು ವಿವೇಕಾನಂದ?
ಇಲ್ಲಿ ನುಡಿದನೆ? ಇಲ್ಲಿ ನಡೆದನೇ? ನೋಡಿದನೆ?
ಇಲ್ಲಿ ತನ್ನಾ ಮಿಂಚು ಗುಡುಗಾಟವಾಡಿದನೆ?

ಎಂದು ಊಹಿಸಿಕೊಳ್ಳುತ್ತಾರೆ. ಮಾಸ್ತಿಯವರ ವ್ಯಕ್ತಿತ್ವದ ಉದಾರತೆಯನ್ನು ರೂಪಿಸುವಲ್ಲಿ ಶ್ರೀರಾಮಕೃಷ್ಣ–ವಿವೇಕಾನಂದರ ಪ್ರಭಾವದ ಪಾತ್ರವೂ ಇದ್ದೀತು.

ದ.ರಾ.ಬೇಂದ್ರೆಯವರು ಶ್ರೀಅರವಿಂದರಿಂದ ಹೆಚ್ಚು ಪ್ರಭಾವಿತರಾದರೂ, ಶ್ರೀರಾಮಕೃಷ್ಣ–ವಿವೇಕಾನಂದರನ್ನು ಕುರಿತು ಕೂಡ ಪದ್ಯ ಬರೆದಿದ್ದಾರೆ. ಅವರ ‘ಶ್ರೀರಾಮಕೃಷ್ಣೋದಯ’ದಲ್ಲಿ ಬರುವ ‘ತ್ರಿವೇಣಿ’ಯ ಕಲ್ಪನೆ ಇಂತಿದೆ :

ಗುರುಗಂಗೆಯಲ್ಲಿ ನೆರೆದಿತ್ತು ಶಿಷ್ಯಮಂಡಲದಖಂಡ ಜಮುನೆ
ಗುಪ್ತ ಶಾರದೆಯ ಗುಪ್ತವಾಹಿನಿಯ ಕರುಣೆ ಮಂದಗಮನೆ.



ಮಾಸ್ತಿ ವೆಂಕಟೇಶ ಅಯ್ಯಂಗಾರ್



ದ.ರಾ.ಬೇಂದ್ರೆ

ಬೇಂದ್ರೆಯವರು ೧೯೪೫ ರಲ್ಲಿ ಪ್ರಕಟವಾದ 'ವಿಚಾರ–ಮಂಜರಿ' ಎನ್ನುವ ತಮ್ಮ ಪುಸ್ತಕದಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಎರಡು ಕಿರುಪ್ರಬಂಧಗಳನ್ನು ಬರೆದಿದ್ದಾರೆ. 'ಶ್ರೀರಾಮಕೃಷ್ಣ ಮನನ' ಎಂಬ ಪ್ರಬಂಧದಲ್ಲಿ ಹೀಗೆ ಹೇಳುತ್ತಾರೆ: "ಶ್ರೀರಾಮ ಕೃಷ್ಣರ ಜನ್ಮದಿಂದ ಪ್ರಾರಂಭವಾದ ಶತಮಾನದಲ್ಲಿ ಭರತ ಭೂಮಿಯಲ್ಲಿ ಗಂಗಾವತರಣವು ತೆರೆತೆರೆಯಾಗಿ ಬಂದಿದೆ.... ಶ್ರೀರಾಮಕೃಷ್ಣ ಮನ್ವಂತರವು ಮಾನವಧರ್ಮವನ್ನು ಸಾರಬಂದಿದೆ. ಶ್ರೀರಾಮಕೃಷ್ಣರು ಅದರ ಮನುವು.... ಶ್ರೀರಾಮಕೃಷ್ಣ ರಸಾಯನವು ನರಲೋಕದ ವಿವೇಕವನ್ನು ಬೆಳಗಿ ಆನಂದಸಾಮ್ರಾಜ್ಯದ ಜಯಭೇರಿಯನ್ನು ಎಲ್ಲೆಡೆಯೂ ಮೊಳಗಿಸಲಿ."

ಡಿ.ವಿ.ಜಿ. ಅವರು ಕೂಡ ಶ್ರೀರಾಮಕೃಷ್ಣ ವಿವೇಕಾನಂದರನ್ನು ಕುರಿತು ಕವನ ರಚನೆ ಮಾಡಿದ್ದಾರೆ. ಪರಮಹಂಸರನ್ನು ಅವರು **"ನಾಸ್ತಿಕ್ಯತಿಮಿರಹರ ಚಂಡಭಾಸ್ಕರ"** ಎಂದು ಕರೆದಿದ್ದಾರೆ.

ಶಿವರಾಮ ಕಾರಂತರು ಮೊದಮೊದಲು ಪರಮಹಂಸರ ಪ್ರಭಾವಕ್ಕೆ ಸ್ವಲ್ಪಮಟ್ಟಿಗಾದರೂ ಒಳಗಾಗಿದ್ದಂತೆ ತೋರುತ್ತದೆ. ಶ್ರೀರಾಮಕೃಷ್ಣರ ಜೀವನಚರಿತ್ರೆಯೊಂದನ್ನು ಕನ್ನಡಕ್ಕೆ ಅವರು ಅನುವಾದಿಸಿದ್ದಾರೆ.

ಕನ್ನಡದ ಅನೇಕ ಲೇಖಕರು ಬೆಂಗಳೂರಿನ ಅಥವಾ ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ನಿಕಟ ಸಂಪರ್ಕವುಳ್ಳವರಾಗಿದ್ದು, ಶ್ರೀರಾಮಕೃಷ್ಣ–ವಿವೇಕಾನಂದರ ಪ್ರಭಾವ ಪರಿವೇಷಕ್ಕೆ ತಮ್ಮ ವೈಯಕ್ತಿಕ ಜೀವನವನ್ನು ಒಳಗುಮಾಡಿಕೊಂಡವರು. ಅವರಲ್ಲಿ ಕೆಲವರನ್ನು ಹೆಸರಿಸುವುದಾದರೆ, ನಾ. ಕಸ್ತೂರಿ, ದೇಜಗೌ, ಪ್ರಭುಶಂಕರ, ಜಿ. ಎಸ್. ಶಿವರುದ್ರಪ್ಪ, ಸುಜನಾ, ಉ.ಕಾ. ಸುಬ್ಬರಾಯಾಚಾರ್, ಕೋ. ಚೆನ್ನಬಸಪ್ಪ, ಕೆ.ಬಿ. ಪ್ರಭುಪ್ರಸಾದ್ ಮುಂತಾದವರು. ಇವರಲ್ಲಿ ಅನೇಕರು ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರನ್ನು ಕುರಿತು ಗದ್ಯಪದ್ಯಗಳಲ್ಲಿ ಬರೆದಿದ್ದಾರೆ.

ಜಿ. ಎಸ್. ಶಿವರುದ್ರಪ್ಪನವರು 'ದಕ್ಷಿಣೇಶ್ವರದಲ್ಲಿ' ಎಂಬ ಕವನ ದಲ್ಲಿ **"ಮುಟ್ಟಿದ್ದೆಲ್ಲ ತೀರ್ಥವಾಯ್ತು, ಮೆಟ್ಟಿದಲ್ಲೆ ದೇಗುಲ"** ಎಂದು ಉದ್ಗರಿಸಿ '**ಪುಲಕ ಬಾಷ್ಪಾಕುಲ**'ದಿಂದ ಹೀಗೆನ್ನುತ್ತಾರೆ:

**ನೂರು ತಾರೆಯೊಡನೆ ಚಂದ್ರ ಬಿಜಯಗೈದ ನಭದೊಲು**
**ನಿನ್ನ ಲೀಲೆ ರಮ್ಯವಾಯ್ತು ಅಂದು ಇದೇ ನೆಲದೊಳು**
**ಬಂದವರನ್ನು ಕರೆದುಕೊಂಡು ಬೆಳ್ಳಿ, ಹಡಗು ನಡೆಯಲು**
**ಮಬ್ಬು ಕವಿದ ಬಂದರಿನೊಳು ಅರಸುತಿಹೆವು ಬೆಳಕನು**

**"ಶ್ರೀರಾಮಕೃಷ್ಣರ ದಿವ್ಯ ಯೋಗಧನುವಿಗೆ ತೊಟ್ಟ ಬ್ರಹ್ಮಾಸ್ತ್ರ ನೀನು"** ಎಂಬುದು ಸ್ವಾಮಿ ವಿವೇಕಾನಂದರನ್ನು ಕುರಿತು ಜಿ.ಎಸ್. ಶಿವರುದ್ರಪ್ಪನವರ ಉಕ್ತಿ. ಮತ್ತೆ ಅವರು ಹಾಡುತ್ತಾರೆ.

**ನಿನ್ನ ವಾಣಿಯು ತುತ್ತ ಚಿಪ್ಪೊಡೆದು ಅದರಲ್ಲಿ**
**ಹುದುಗಿದವರೆದ್ದೆದ್ದು ಹೊರಬಂದರು.**
**ಕ್ರಿಮಿ ಎಂದು ಮಲಗಿದವರೆದ್ದು ಕುಲಶೈಲದೊಲು**
**ಮುಗಿಲೆಡೆಗೆ ಮುಡಿ ಎತ್ತಿ ನಿಂತುಕೊಳಲು**
**ಏಳು ಕಡಲಿನ ತೆರೆಯು ತಾಳವನು ಹಾಕಿದುವು**

ದಿಕ್ಕುದೆಸೆ ಹಾಡಿದುವು ಜಯಗಾಥವ!
ಪೂರ್ವ ಪಶ್ಚಿಮವೆರಡು ಒಂದನೊಂದನ್ನಪ್ಪಿ
ಕಂಡುಕೊಂಡುವು ದಿವ್ಯ ಹೃದಯಾರ್ಥವ !

ಸ್ವಾಮಿ ವಿವೇಕಾನಂದರ ಬಗ್ಗೆ ಪ್ರಸಿದ್ಧ ಸಾಹಿತಿಗಳಾಗಿದ್ದ ಶ್ರೀ ವಿ.ಸೀತಾರಾಮಯ್ಯನವರು ಹೀಗೆನ್ನುತ್ತಾರೆ:

ಸಂನ್ಯಾಸಿಗೆಲ್ಲಿಯದು ಲೋಕಬದುಕಿನ ಗೊಡವೆ
ಎನುತಿದ್ದ ಬಂಜೆನುಡಿ ಅಮರವಾಯಿತ್ತೆಂದು
ಬ್ರಹ್ಮ ನಕ್ಕಿತು. ನಲಿವು ಹಣ್ಣಾಯಿತು.

ಅಮೆರಿಕದ ಬಾಸ್ಟನ್ನಿನ ವೇದಾಂತ ಕೇಂದ್ರದಲ್ಲಿ ಸ್ವಾಮಿ ವಿವೇಕಾನಂದರ ಛಾಯಾಚಿತ್ರವನ್ನು ನೋಡಿದ ವಿನಾಯಕರ (ವಿ.ಕೃ. ಗೋಕಾಕ್) ಮಾತುಗಳಿವು:

ಗುರುವಿನಾಶೀರ್ವಾದ ನಿನಗೆ ಬೆಂಬಲವಿರಲು
ಸಪ್ತಸಾಗರಗಳನು ನುಗ್ಗಿ ಬಂದೆ
ನಿನ್ನ ಎದೆಯೊಲವಿಂದ
ನಿನ್ನಾತ್ಮಶ್ರದ್ಧೆಯಿಂದ
ಬುದ್ಧಿ ತೀಕ್ಷ್ಣತೆಯಿಂದ
ಪರದೇಶ ನಿನಗಾಯ್ತು ನಿನ್ನ ದೇಶ.
ಹರಡಿತೆಲ್ಲೆಡೆ ನಿನ್ನ ದಿವ್ಯ ಸಂದೇಶ
ಒಂದೇ ಒಂದೇ ಮನುಕುಲವೆಲ್ಲಾ ಒಂದೇ

ಇದು ರಾಘವರ (ಎಸ್.ವಿ.ಸೀತಾರಾಮಯ್ಯ) ಆಹ್ವಾನ :

ಮೈತಳೆದು ಗರ್ಜಿಸುತ ಬಾ ಧೀರ ವೇದಾಂತ ಕೇಸರಿ
ಸಮರಯೋಗವ ಕಲಿಸೆ ಸಮರಾರು ನಿನಗೆ? ನೀನೇ ಸರಿ!

ಕಯ್ಯಾರ ಕಿಞ್ಞಣ್ಣ ರೈ ಹೀಗೆ ಹಾಡುತ್ತಾರೆ :

ಶತಮಾನದ ಸ್ತುತಿಗಾನದಿ
ಮುನಿವರ್ಧನ ಕರೆವೆ
ಎನ್ನಾತ್ಮಕೆ ನಿನ್ನಾತ್ಮದ
ಪುಣ್ಯವನೆರೆ ಗುರುವೆ !

ಇದು ಅನೇಕ ಹೃದಯಗಳ ಕರೆ ಮತ್ತು ಮೊರೆ.

ಶ್ರೀರಾಮಕೃಷ್ಣ, ವಿವೇಕಾನಂದರ ಜೀವನಚರಿತ್ರೆಗಳು ಕನ್ನಡದಲ್ಲಿ ಬಹುಸಂಖ್ಯೆಯಲ್ಲಿವೆ. ಅವುಗಳಲ್ಲಿ ಕೆಲವನ್ನಷ್ಟೆ ಇಲ್ಲಿ ಉಲ್ಲೇಖಿಸಬಹುದು: ಎಂ.ಎಸ್.ಪದ್ಮನಾಭರಾಯರ 'ಶ್ರೀರಾಮಕೃಷ್ಣ ಪರಮಹಂಸರು', ಡಿ.ಆರ್.ಚನ್ನೇಗೌಡರ 'ಶ್ರೀರಾಮ ಕೃಷ್ಣ ಪರಮಹಂಸದೇವ', ರಂ. ರಾ. ದಿವಾಕರರ 'ಶ್ರೀರಾಮಕೃಷ್ಣ ಚರಿತಾಮೃತ', ಸ್ವಾಮಿ ಸೋಮನಾಥಾನಂದಜಿ ಅವರು ಬರೆದಿರುವ ದಿವ್ಯತ್ರಯರ ಜೀವನಚರಿತ್ರೆಗಳು, ಸ್ವಾಮಿ ಹರ್ಷಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ, ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ರಾಘವೇಶಾನಂದಜಿ ಮತ್ತು ಸ್ವಾಮಿ ನಿತ್ಯಸ್ಥಾನಂದಜಿ ಮುಂತಾದ ರಾಮಕೃಷ್ಣ ಮಹಾಸಂಘದ ಯತಿಗಳು ಬರೆದಿರುವ ಅನೇಕ ಜೀವನಚರಿತ್ರೆಗಳು ಮತ್ತು ಅಧ್ಯಯನಗಳು, ಅ.ನ.ಕೃ. ಹಾಗೂ ಡಾ. ಪ್ರಭುಶಂಕರ ರಚಿಸಿರುವ ವಿವೇಕಾನಂದರ ಜೀವನ ವೃತ್ತಗಳು, ಮಲ್ಲಿಕಾ ಅವರಿಂದ ರಚಿತವಾದ 'ಶ್ರೀವಿವೇಕಾನಂದ ವಿಜಯಂ' ಮತ್ತು ಇತ್ತೀಚೆಗೆ ಶ್ರೀ ವಿ. ಕೃಷ್ಣಶೆಟ್ಟಿ ಅವರು ರಚಿಸಿರುವ 'ಅವತಾರಶೃಂಗ' ಇತ್ಯಾದಿ.

ಮೈಸೂರು ಮತ್ತು ಬೆಂಗಳೂರುಗಳ ಶ್ರೀರಾಮಕೃಷ್ಣಾಶ್ರಮಗಳು ವಿಪುಲವಾಗಿ ಹೊರತಂದಿರುವ ಶ್ರೀರಾಮಕೃಷ್ಣ–ವಿವೇಕಾನಂದರ ಸಾಹಿತ್ಯವನ್ನು ಇಲ್ಲಿ ಅಗತ್ಯವಾಗಿ ನೆನೆಯಬೇಕು. ಕನ್ನಡದಲ್ಲಿ ಅವತರಿಸಿರುವ 'ಶ್ರೀರಾಮಕೃಷ್ಣ ವಚನವೇದ', 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ಹಾಗೂ 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ' ಯನ್ನು ಮರೆಯುವಂತೆಯೆ ಇಲ್ಲ. ಈ ಎಲ್ಲ ಬರವಣಿಗೆಗಳಿಂದ ಕನ್ನಡದ ಶ್ರೀಮಂತಿಕೆ ವೃದ್ಧಿಸಿದೆ.

ಶ್ರೀರಾಮಕೃಷ್ಣರಿಂದ ಪ್ರಭಾವಿತರಾಗದವರೂ ಸ್ವಾಮಿ ವಿವೇಕಾನಂದರಿಂದ ಆಕರ್ಷಿತರಾಗಿದ್ದಾರೆಂಬುದು ಲಕ್ಷಿಸಬೇಕಾದ ಸಂಗತಿ. ಏಕೆಂದರೆ, ಸ್ವಾಮೀಜಿಯವರ ಸಂದೇಶ ಲೌಕಿಕ ವಾದುದೂ ಹೌದು. ಯುವಜನಾಂಗದ ಪಾಲಿಗೆ ಅದರ ಸೆಳೆತ ವಿಶೇಷವಾದುದು. ಇಂದಿನ ಕೆಲವರು ಲೇಖಕರ ಮೇಲೂ ವಿವೇಕಾನಂದರ ಪ್ರಭಾವವಾಗಿರುವುದು ಸಾಧ್ಯ. ಅವರಲ್ಲಿ ಕೆಲವರು ಸ್ವಾಮೀಜಿಯ ಸಂದೇಶವನ್ನು ತಮ್ಮ ಪುಸ್ತಕಗಳಲ್ಲಿ ಹಿಡಿದಿಟ್ಟಿರುವುದುಂಟು (ಜ. ಹೊ. ನಾರಾಯಣಸ್ವಾಮಿಯವರ ಕೃತಿಯೊಂದನ್ನು ಇಲ್ಲಿ ಹೆಸರಿಸಬಹುದು).

ಇತ್ತೀಚಿನ ದಿನಗಳಲ್ಲಿ ಸಾಹಿತ್ಯಾಧ್ಯಯನಶೀಲರಾದ ಡಾ. ಎಚ್. ರಾಮಚಂದ್ರಸ್ವಾಮಿ, ಡಾ. ಎಚ್.ಎನ್. ಮುರಳೀಧರ, ಮುಂತಾದವರು ತಮ್ಮ ಕೃತಿಗಳು, ಕವನಗಳು, ಲೇಖನಗಳು ಮತ್ತು ಅನುವಾದಗಳ ಮೂಲಕ ರಾಮಕೃಷ್ಣ–ವಿವೇಕಾನಂದ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡುತ್ತಿದ್ದಾರೆ. ಡಾ. ವಿಜಯಭಾರತಿಯವರು ಕನ್ನಡದಲ್ಲಿ ಬಂದಿರುವ ರಾಮಕೃಷ್ಣ ಸಾಹಿತ್ಯವನ್ನು ಕುರಿತು ಅಧ್ಯಯನವನ್ನು ನಡೆಸಿ, 'ಶ್ರೀರಾಮಕೃಷ್ಣ ಕೃತಿ ತಪೋವನ' ಎಂಬ ತಮ್ಮ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪಡೆದಿದ್ದಾರೆ.

ಇದು ಸ್ಥೂಲ ಸಮೀಕ್ಷೆಯಷ್ಟೆ; ಪರಿಚಯವೆಂದರೂ ಸರಿಯೆ. ಒಟ್ಟಿನ ಮೇಲೆ ಹೇಳುವುದಾದರೆ ಶ್ರೀ ರಾಮಕೃಷ್ಣ ಪರಮ ಹಂಸರ ಮತ್ತು ಸ್ವಾಮಿ ವಿವೇಕಾನಂದರ ಪ್ರಭಾವ ಆರ್ವಾಚೀನ ಕನ್ನಡ ಸಾಹಿತ್ಯದ ಒಂದು ಅವಿಭಾಜ್ಯ ಅಂಗವಾಗಿದೆ. ರಾಷ್ಟ್ರ ಕುಂಡಲಿಯನ್ನೇ ಎಚ್ಚರಿಸಿದ ಆ ಮಹಾಚೇತನಗಳ ದಿವ್ಯ ಚುಂಬಕ ಶಕ್ತಿಯಿಂದ ಕನ್ನಡ ಸಾಹಿತಿಗಳು ಮತ್ತು ಸಾಹಿತ್ಯ ತಪ್ಪಿಸಿಕೊಳ್ಳುವುದು ಹೇಗೆ ತಾನೇ ಸಾಧ್ಯವಿತ್ತು ?

(ದಿವ್ಯತ್ರಯರನ್ನು ಕುರಿತು ಕನ್ನಡದಲ್ಲಿ ಬಂದಿರುವ ಪದ್ಯಗಳನ್ನು ಕೂಡಿಸಿ 'ಸುರನದಿಯ ತೀರ್ಥ' ಎಂಬ ಪುಸ್ತಕವನ್ನು ಡಾ. ಸಿ.ಪಿ. ಕೃಷ್ಣಕುಮಾರ್ ಅವರು ಸಂಪಾದಿಸಿದ್ದಾರೆ. ಅದಲ್ಲದೆ 'ರತ್ನತ್ರಯ' ಎಂಬ ಪುಸ್ತಕದಲ್ಲಿ ದಿವ್ಯತ್ರಯರ ಜೀವನ ಸಂದೇಶಗಳನ್ನು ಸಂಗ್ರಹಿಸಿದ್ದಾರೆ. ಅದಲ್ಲದೆ 'ವಿವೇಕಪ್ರಭ' ದಲ್ಲಿ ಅವರ ಹಲವಾರು ಲೇಖನಗಳು ಪ್ರಕಟವಾಗಿವೆ. – ಸಂ.)